ಮಾತ್ರ ತೆಗೆದುಕೊಂಡಾಗ ಕ್ಷಣಕಾಲ ನೋವು ಮರೆಯಾದಂತೆನ್ನಿಸಿದರೂ ಅದು ಒಳಗೇ ಮೆದುಳನ್ನು ಕೆರೆದಂತಾಗುತ್ತಿರುತ್ತದೆ. ಸಣ್ಣಗೆ ಬ್ರೈನ್ ಟ್ಯೂಮರ್ ಕೂಡ ಆರಂಭವಾಗಿದೆ' ಎಂದುಬಿಟ್ಟರು. ನನಗೆ ಬರಸಿಡಿಲು ಬಡಿದಂತಾಯಿತು.

ಟವರನ್ನು ತೆಗೆಸಲು ಏನು ಮಾಡಬೇಕು ಎಂದು ವಿಚಾರಿಸಲು ಚಿರಂತನ್ ಲಾಯರ್ ಬಳಿ ಹೋದ. ಆ ಅಡ್ವೋಕೇಟ್, 'ತಿಂಗಳಿಗೊಂದರಂತೆ ಮೂರು ಅರ್ಜಿಗಳನ್ನು ಇತಿಂಥವರಿಗೆ ಕೊಟ್ಟು ಅದರ ಎಲ್ಲ ಸ್ವೀಕೃತಿಗಳೊಂದಿಗೆ ಬನ್ನಿ. ಹಾಗೆಯೇ ಡಾಕ್ಟರಿಂದ ಒಂದು ಸರ್ಟಿಫಿಕೇಟ್ ತನ್ನಿ' ಎಂದಂದು ಅಡ್ವೈಸ್ ಶುಲ್ಕ ಪಡೆದುಕೊಂಡು ಕಳಿಸಿದ. ಅವರು ಹೇಳಿದಂತೆ ಸುತ್ತಮುತ್ತಲ ಹತ್ತಾರು ಜನರಿಗೆ ವಿವೇಚನೆ ಮೂಡಿಸಿ, ಅರ್ಜಿಗೆ ಸಹಿ ಹಾಕಿಸಿಕೊಂಡು ಶಾಸಕರ ಬಳಿಗೆ ಹೋದರೆ, ಅವರು ಒಂದೇ ಮಾತು ಹೇಳಿದರು: 'ಮೇಡಂ, ನಾನು ವಿರೋಧಪಕ್ಷದಲ್ಲಿ ಇರಬಹುದು. ಆದರೆ ಇದರ



ಹಿಂದೆ ಒಂದು ದೊಡ್ಡ ಮಾಫಿಯಾ ಇದೆ. ಅದನ್ನು ನಾವು ನೀವು ಹೆದರಿಸೋಕ್ಕೆ ಆಗಲ್ಲ. ಹೊಸದಾಗಿ ಹಾಕೋಕ್ಕೆ ಬಂದಿದ್ದರೆ ಹೇಳಿ, ನಿಲ್ಲುಸ್ತೀನಿ. ಈಗಾಗ್ಲೇ ಹಾಕಿರೋದನ್ನ ತೆಗಿಸೋದು ಅಷ್ಟು ಸುಲಭದ ಕೆಲಸ ಅಲ್ಲ' ಅಂದುಬಿಟ್ಟರು. 'ಯಾಕೆ ಆಗಲ್ಲ, ನೀವೂ ಅವರ ಕಡೆಯೇ ಶಾಮೀಲಾಗಿ ಬಿಟ್ಟಿದ್ದೀರಿ. ನಾನು ಜನರನ್ನು ದಂಗೆ ಏಳಿಸ್ತೀನಿ, ಸ್ಟ್ರೈಕ್ ಮಾಡಿಸ್ತೀನಿ, ಉಪವಾಸ ಸತ್ಯಾಗ್ರಹ ಕೂರ್ತೀನಿ' ಎಂದು ಆವೇಶದಲ್ಲಿ ಹೇಳಿ ಹೊರಬಂದೆ. ಆದರೆ ಅವರು ಮುಗುಳ್ನಕ್ಕದ್ದು ನನಗೆ ಕಾಣಲಿಲ್ಲ.

ಮತ್ತೆ ಡಾಕ್ಟರರ ಬಳಿಬಂದು, 'ಲಾಯರ್ ಕೇಳಿದ್ದಾರೆ, ಅಂಥ ಒಂದು ಸರ್ಟಿಫಿಕೇಟ್ ಕೊಡಿ' ಎಂದರೆ ಅವರು, 'ಅದು ಯೂನಿವರ್ಸಲ್ ಟ್ರೂಥ್. ಆದರೆ ನಿಮಗೆ ಬ್ರೈನ್ ಟ್ಯೂಮರ್ ಬಂದಿರೋದು ಇದರಿಂದಾನೆ ಅಂಥ ಯಾವ ಡಾಕ್ಟರರೂ ಸರ್ಟಿಫೈ ಮಾಡೋಕ್ಕೆ ಆಗೋಲ್ಲ. ಅಲ್ಲದೇ ಯಾವ ಡಾಕ್ಟರ್ರೂ ಜಡ್ಜ್ ಮುಂದೆ ನಿಂತು ಪ್ರೂವ್ ಮಾಡೋಕ್ಕಾಗಲ್ಲ. ಯಾಕೆಂದರೆ ಕೋರ್ಟ್ ಸಾಕ್ಷಿ ಕೇಳುತ್ತೆ. ಕಂಪನಿಯವರು ತಮ್ಮ ಫ್ರೀಕ್ವೆನ್ಸಿ ಮನುಷ್ಯರಿಗೆ ಅಪಾಯಕಾರಿಯಾಗದಷ್ಟು ಕಡಿಮೆ ಪ್ರಮಾಣದಲ್ಲಿದೆ ಅಂಥ ಅವರ ಉಪಕರಣಗಳಿಂದ ಅಳೆದು ತೋರಿಸ್ತಾರೆ. ಆದರೆ ನಾವು ಡಾಕ್ಟರರು, ಹಾಗೆ ಅಳೆದು ತೋರಿಸಲು ನಮ್ಮಲ್ಲಿ ಯಾವ ಉಪಕರಣಗಳೂ ಇಲ್ಲ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು. ಮಾತ್ರವಲ್ಲ, 'ಯಾವ ಡಾಕ್ಟರರೂ ತಮ್ಮ ಪ್ರಾಕ್ಟೀಸನ್ನು ಬಿಟ್ಟು, ಕೋರ್ಟಿಗೆ ಅಲೆಯೋಕ್ಕೆ ಸಿದ್ಧರಿರಲ್ಲ' ಎಂಬ ಅದರ ಹಿಂದಿನ ಮರ್ಮವನ್ನೂ ಹೇಳಿದರು.

ಮನೆಗೆ ಬಂದು ಎಲ್ಲ ದಾರಿಗಳು ಬಂದ್ ಆದ ಬಗ್ಗೆ ಚಿರಂತನ್ ಜೊತೆ ಚರ್ಚಿಸಿದೆ. ಪೊಲೀಸ್ ಕಂಪ್ಲೇಂಟ್ ಕೊಟ್ಟರೂ ಪ್ರಯೋಜನವಿಲ್ಲ. ಇನ್ನು ಜನರನ್ನು ದಂಗೆ ಏಳಿಸುವ ಶಕ್ತಿಯೂ ನಮಗಿಲ್ಲ. ಅದಕ್ಕೆ ಬೆಂಕಿಹಚ್ಚಿ ಸುಟ್ಟುಹಾಕಿ ದಕ್ಕಿಸಿಕೊಳ್ಳುವ ಸಾಮರ್ಥ್ಯವೂ ನಮ್ಮಲ್ಲಿಲ್ಲ. ಅದಕ್ಕೆ ಪರಿಹಾರವೊಂದೇ ಎಂದರೆ, ಮನೆಯನ್ನು ಬದಲಾಯಿಸುವುದು. ಆದರೆ, ಸ್ವಂತ ಮನೆ. ಪುಷ್ಪಕ್‌ಗೆ ಶಾಲೆ ಬದಲಾಯಿಸಬೇಕೆಂದರೆ ಅದಕ್ಕೆ ಲಕ್ಷಾಂತರ ರೂಪಾಯಿ ಡೊನೇಷನ್ ಕಕ್ಕಬೇಕು. ಚಿರಂತನ್‌ಗೂ ಇಲ್ಲಿಂದ ಆಫೀಸ್‌ಗೆ ಹೋಗಿಬರಲು ಮೆಟ್ರೊ ಅನುಕೂಲ ಇದೆ. ಇದನ್ನು ಮಾರಿ ಬೇರೆ ಕಡೆ ಮನೆ ಕೊಳ್ಳುವುದೂ ತಕ್ಷಣಕ್ಕೆ ಆಗುವ ಕೆಲಸವಲ್ಲ. ಅಲ್ಲಿಯವರೆಗೆ ಅದರ ಸೆಳೆತದಿಂದ ತಪ್ಪಿಸಿಕೊಳ್ಳುವುದು ಹೇಗೆ?

ನನಗೆ ಹುಚ್ಚು ಹಿಡಿದಂತಾಗುತ್ತಿತ್ತು. ನಾಲ್ಕು ಕಾಸಿನ ಎಂಜಲ ಆಸೆಗೆ ಇಷ್ಟೆಲ್ಲ ಜನರ ಪ್ರಾಣದೊಂದಿಗೆ ಆಟವಾಡುತ್ತಿರುವ ಪಕ್ಕದ ಬಿಲ್ಡಿಂಗ್‌ನ ಮಾಲೀಕನಿಗೆ ನಡುರಸ್ತೆಯಲ್ಲಿ ನಿಲ್ಲಿಸಿಕೊಂಡು ಚಪ್ಪಲಿಯಲ್ಲಿ ಹೊಡೆಯಬೇಕು ಎಂದು ತೀವ್ರವಾಗಿ ಅನ್ನಿಸುತ್ತಿತ್ತು. ಆ ಆವೇಶದಲ್ಲೇ ಅವನನ್ನು ನಡುರಸ್ತೆಯಲ್ಲಿ ಕೊರಳಪಟ್ಟಿ ಹಿಡಿದು ನಿಲ್ಲಿಸಿ, 'ಅಷ್ಟು ಬಾಡಿಗೆಯನ್ನು ನಾನೇ ಕೊಡುತ್ತೇನೆ, ತೆಗೆಸಿಬಿಡು' ಎಂದರೆ, 'ಮೇಡಂ, ಹತ್ತು ವರ್ಷದ ಹಿಂದೆಯೇ ಇಪ್ಪತ್ತೈದು ವರ್ಷಕ್ಕೆ ಅಂತ ಅಗ್ರಿಮೆಂಟ್ ಮಾಡ್ಕೊಂಡಿದ್ದಾರೆ. ಅವಾಗ ಜಾಸ್ತಿ ದುಡ್ಡು ಅಂತ ಆಸೆಪಟ್ಟಿದ್ದು ನಿಜ. ಆದರೆ ಈಗ ಆ ಹಣ ಏನೇನೂ ಅಲ್ಲ. ಮೇಲಾಗಿ ಆಗ ಇದ್ದ ಒಂದು ಕಂಪನಿಯ ಜೊತೆಗೆ ಈಗ ಹತ್ತಾರು ಕಂಪನಿಗಳ ರಿಫ್ಲೆಕ್ಟರ್‌ಗಳನ್ನೂ ಅಳವಡಿಸಿಕೊಂಡಿದ್ದಾರೆ. ಏನು ಮಾಡಲಿ, ನಾನೂ ಅಸಹಾಯಕ. ಅದನ್ನ ತೆಗೆಸೋಕ್ಕೆ ನನ್ನ ಸೈನ್ ಬೇಕಿದ್ದರೆ ಹೇಳಿ, ಯಾವ ಕ್ಷಣದಲ್ಲಿ ಎಲ್ಲಿಗೆ ಬೇಕಾದರೂ ಬಂದು ಹಾಕಿಕೊಡ್ತೀನಿ...' ಅಂದುಬಿಟ್ಟ.

ಇದ್ದ ಎಲ್ಲ ದಾರಿಗಳೂ ಬಂದ್ ಆದಮೇಲೆ ಗುಬ್ಬಚ್ಚಿಗಳಂತೆ ನಾವೇ ಪಲಾಯನಗೈಯದೆ ಬೇರೆ ದಾರಿಯೇ ಇರಲಿಲ್ಲ. ಈ ನಗರವಾಸವೇ ಸಾಕು. ಈ ಮೊಬೈಲು, ಈ ಇಂಟರ್‌ನೆಟ್ಟು, ಈ ರೇಡಿಯೊ, ಈ ಟಿ.ವಿ., ಯಾವುದೂ ಬೇಡ. ಯಾವುದಾದರೂ ಕಾಡಿನಲ್ಲಿ ಒಂಟಿಯಾಗಿ ಮನೆ ಮಾಡಿಕೊಂಡು ಇದ್ದುಬಿಡಬೇಕು ಎಂದು ತೀವ್ರವಾಗಿ ಅನ್ನಿಸಲಾರಂಭಿಸಿತು. 'ಆ ಕಾಡಿನಲ್ಲಿ ಏನಾದರೂ ಕಾಯಿಲೆ ಬಂದರೆ ಏನು ಮಾಡ್ತೀಯಾ ಮಮ್ಮಿ' ಎಂದು ಮಗ ಪುಷ್ಪಕ್ ಮುಗ್ಧವಾಗಿ ಕೇಳಿದ. 'ಆದರೆ, ಈ ಕಾಂಕ್ರೀಟ್ ಕಾಡಿನಲ್ಲಿ ನನಗೆ ಬ್ರೈನ್ ಟ್ಯೂಮರ್ರೇ ಬಂದೇಬಿಟ್ಟಿದೆಯಲ್ಲ ಮಗನೇ? ಅದಕ್ಕಿಂತ ದೊಡ್ಡ ಕಾಯಿಲೆ ಆ ಕಾಡಿನಲ್ಲಿ ಬರಲು ಸಾಧ್ಯವಿಲ್ಲ ಬಿಡು' ಎಂದು ಅಪ್ಪಿಕೊಂಡು ಸಮಾಧಾನಿಸಿದೆ.

ಒಂದೆರಡು ದಿನ ರಜೆ ಹಾಕಿಸಿ ಚಿರಂತನ್‌ನನ್ನೂ ಕರೆದುಕೊಂಡು ಹೋಗಿ ಯಾವುದೂ ಟವರ್‌ಗಳಿಲ್ಲದ ಮಲೆನಾಡಿನ ಒಂದೆರಡು ಮನೆಗಳಿರುವ ಹಳ್ಳಿಯನ್ನು ಹುಡುಕಿ ಬಾಡಿಗೆಗೆ ಮನೆ ಕೇಳುವ ಪ್ರಯತ್ನ ಮಾಡಿದೆ. ಹಳ್ಳಿಗರು ಮೇಲಿಂದ ಕೆಳಕ್ಕೆ ನೋಡಿ, 'ನಕ್ಸಲ್‌ರು ಬಂದು ಹಿಂಗೆ ಬಾಡಿಗೆಗೆ ಕೇಳಿದ್ರೆ ಕೊಡಕೂಡದು ಅಂತ ಪೊಲೀಸ್ನೋರು ತಾಕೀತು ಮಾಡೌರೆ' ಅಂದುಬಿಟ್ಟರು. ಅಲ್ಲೆಲ್ಲಾದರೂ ಸೈಟನ್ನು ಪಡೆದು ಮನೆ ಕಟ್ಟಿಸಿಕೊಳ್ಳುವುದೂ ನಾವಿರುವ ಪರಿಸ್ಥಿತಿಯಲ್ಲಿ ಅಷ್ಟು ಸುಲಭದ ಮಾತಾಗಿರಲಿಲ್ಲ. ಹತ್ತಾರು ಹೋಬಳಿ, ನಗರಗಳನ್ನೂ ಸುತ್ತಿ ನೋಡಿದೆವು. ಬುದ್ಧ, ಸಾವಿರದ ಮನೆಯ ಸಾಸಿವೆಯ ತರಲು ಹೇಳಿದಂತೆ ಟವರುಗಳಿಲ್ಲದ ಊರುಗಳೇ ಸಿಗಲಿಲ್ಲ!

ಇನ್ನೆಲ್ಲಿ ಹೋಗಿ ಸಾಯಲಿ ನಾನು! ನಗರದಲ್ಲೂ ವಾಸ ಮಾಡೋಕ್ಕೆ ಸಾಧ್ಯವಿಲ್ಲ, ಹಳ್ಳಿಯೊಳಗೂ ಸಾಧ್ಯವಿಲ್ಲವೆಂದಾದರೆ ಪ್ರತಿಭಟನಾತ್ಮಕವಾಗಿ ದಯಾಮರಣ ಕೋರಿ ರಾಷ್ಟ್ರಪತಿಗೆ ಪತ್ರ ಬರೆದುಬಿಡಬೇಕು ಎಂದು ತೀವ್ರವಾಗಿ ಅನ್ನಿಸಲಾರಂಭಿಸಿತು.

ನನ್ನ ಮನಸ್ಸಿನ ದುಗುಡ ಮಡುಗಟ್ಟಿರುವಂತೆಯೇ ಹೊರಗಡೆಯೂ ಮೋಡ ಮಡುಗಟ್ಟಿ ಕತ್ತಲೆ ಆವರಿಸಿತ್ತು. ಅದೇ ಭರದಲ್ಲಿ ಕುಳಿತು, ಸುಮಾರು ಹತ್ತು ಪುಟದ ಪತ್ರ ಬರೆದೆ. ನನಗೆ ಅನ್ನಿಸಿದ್ದನ್ನೆಲ್ಲ ಬರೆದೆ. ನಾನು ತಳಮಳಿಸಿದ ನೋವನ್ನೆಲ್ಲ ಆ ಪತ್ರದಲ್ಲಿ ಮಂಡಿಸಿದೆ. ನನ್ನ ಮನೆ, ನನ್ನ ಸಂಸಾರ, ನನ್ನ ಜೀವನ, ನನ್ನ ಜೀವ ಕೂಡ ಈ ಫ್ರೀಕ್ವೆನ್ಸಿ ರಾಕ್ಷಸನಿಗೆ ಬಲಿಯಾಗುತ್ತಿರುವುದನ್ನು ಸವಿವರವಾಗಿ ಬರೆದೆ. ಅಕ್ಷರ ಅಕ್ಷರಕ್ಕೂ ರಕ್ತ–ಮಾಂಸವನ್ನು ತುಂಬಿದೆ, ನೋವನ್ನು ತುಂಬಿದೆ.

ಇ–ಮೇಲ್ ತೆರೆದು ರಾಷ್ಟ್ರಪತಿಯವರ ಮೇಲ್ ಐ.ಡಿ. ಟೈಪಿಸಿದೆ. ಪ್ರಧಾನ ಮಂತ್ರಿಗಳ, ಕೇಂದ್ರ ಸಂಪರ್ಕ ಖಾತೆ ಸಚಿವರ ಮೇಲ್ ಖಾತೆಗೆ ಸಿಸಿ ಹಾಕಿದೆ. ಮತ್ತು ರಾಜ್ಯದ ರಾಜ್ಯಪಾಲರ, ಮುಖ್ಯಮಂತ್ರಿಗಳ ಮೇಲ್ ವಿಳಾಸಕ್ಕೆ ಬಿಸಿಸಿ ಹಾಕಿದೆ. ನನ್ನ ನೋವಿನ ಸಂಪುಟವನ್ನು ಅಟ್ಯಾಚ್ ಮಾಡಿದೆ. ಅದು ತೆರೆದುಕೊಳ್ಳಲು ಒಂದು ನಿಮಿಷ ಕಾಲಾವಕಾಶ ಬೇಡುತ್ತಿತ್ತು.

ಅಲ್ಲಿಯವರೆಗೆ ಒಂದು ದೀರ್ಘ ಉಸಿರೆಳೆಯೋಣವೆಂದು ಕಿಟಕಿಯನ್ನು ತೆರೆದೆ. ಫಳಾರೆಂದು ಸಿಡಿದ ಸಿಡಿಲಿನ ಬಡಿತಕ್ಕೆ ತಾಳಲಾರದೇ ರಪ್ಪನೇ ಕಿಟಕಿಯನ್ನು ಬಡಿದು ಹಿಂದೆ ಹಾರಿಬಿದ್ದೆ. ಸದ್ಯ, ಹೀಗಾದರೂ ನಾನು ಸಾಯಬಾರದಿತ್ತೇ ಅನ್ನಿಸಿತು. ಮೈಕೈ ಮುಟ್ಟಿ ನೋಡಿಕೊಂಡೆ. ಇಲ್ಲ, ನಾನು ಸತ್ತಿಲ್ಲ, ಬದುಕಿದ್ದೇನೆ... ಕಿಟಕಿಯಾಚೆ ಏನೋ ಅಗಾಧವಾದ ಬೆಳಕು ಕಂಡಂತಾಯಿತು. ಮೆಲ್ಲಗೆ ಕಿಟಕಿಯತ್ತ ನೋಟ ಹಾಯಿಸಿದೆ. ಎದ್ದು ನಿಂತೆ.

ಅಷ್ಟೆತ್ತರದ ಮೊಬೈಲ್ ಟವರ್‌ನ್ನು ಪೂರಾ ಆಕ್ರಮಿಸಿ ಧಗಧಗ ಉರಿಯುತ್ತಿದ್ದ ಬೆಂಕಿಯ ಝಳ ನನ್ನನ್ನೂ ತಾಕುತ್ತಿತ್ತು!